# ಗುಜರಾತ್ ಮಾದರಿ ಬೇಡ

CPI(M)

## ಸಿಪಿಐ(ಎಂ)ಗೆ ಮತ ನೀಡಿ

## ಎಡಪಕ್ಷಗಳನ್ನು ಬಲಪಡಿಸಿ

: ಪ್ರಕಟಣೆ :
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ

# ಹರಳುಗಟ್ಟಿದ ವಾಸ್ತವಾಂಶಗಳು
# ಕೂಗಿ ಹೇಳುವ ಕತೆಯೇ ಬೇರೆ

ಗುಜರಾತಿನಲ್ಲಿ ಸಾಧಿಸಲಾಗಿದೆ ಎಂದು ಹೇಳಲಾಗುತ್ತಿರುವ ಆಧಾರದಲ್ಲಿ ಭಾರತಕ್ಕಾಗಿ **ಮೋದಿಯ ಭಾರಿಗಾತ್ರದ (ವಿರಾಟ) ಮಾದರಿಯು** ಸಿದ್ಧವಾಗಿದೆ. ಖಾಸಗಿ ಕಂಪನಿಗಳಿಗೆ ಮತ್ತು ಮುಖ್ಯಮಂತ್ರಿಯ ಚಮಚಾಗಳಿಗೆ ರಾಜ್ಯದ ಬೊಕ್ಕಸದಿಂದ ಭಾರಿ ಮೊತ್ತದ ಧಾರಾಳ ಕೊಡುಗೆ ನೀಡಿರುವ ದಾಖಲೆಗಳು ಸಾಕಷ್ಟು ಇವೆ. ಇದನ್ನೇ ಗುಜರಾತ್ ಮಾದರಿ ಎಂದು ಕೂಗಿ ಹೇಳಲಾಗುತ್ತಿದೆ. ಮೋದಿ ಈ ಹಿಂದೆಯೇ ಜಮೀನುಗಳನ್ನು ದಾನ ಮಾಡಿದ ವಿವರಗಳನ್ನು ಈ ಪುಸ್ತಿಕೆಯ ಅನುಬಂಧದಲ್ಲಿ ನೀಡಲಾಗಿದೆ.

ಅತಿ ಕಡಿಮೆ ಅಂದಾಜು ಮಾಡಿದರೂ ಈ ಎಲ್ಲಾ ವ್ಯವಹಾರಗಳನ್ನು ಒಟ್ಟುಗೂಡಿಸಿದರೆ ಬೊಕ್ಕಸಕ್ಕೆ ಏನಿಲ್ಲೆಂದರೂ **ಒಂದು ಲಕ್ಷ ಕೋಟಿ ರೂಪಾಯಿಗಳ ನಷ್ಟವಾಗಿದೆ.**

ಅದರಲ್ಲಿ ಕೇವಲ ಭ್ರಷ್ಟಾಚಾರ ಒಳಗೊಂಡಿರುವ ಪ್ರಶ್ನೆ ಮಾತ್ರವಲ್ಲ; ಆ ಮಾದರಿಯ ಗರ್ಭದಲ್ಲೇ ಅದು ಸೇರಿಹೋಗಿದೆ. ಆದರೆ ಅದರ ಕತೆ ಅಲ್ಲಿಗೇ ಮುಗಿಯುವುದಿಲ್ಲ.

ತಾನೇ ಸರ್ವಜ್ಞ ಎಂದು ಗರ್ವದಿಂದ ಹೇಳಿಕೊಳ್ಳುವ ಮೋದಿಯ ಯಾವ ಹೇಳಿಕೆಗಳಲ್ಲಾದರೂ ಯಾವತ್ತಾದರೂ ದುಡಿಯುವ ಜನರ ಅಥವಾ ಕಾರ್ಮಿಕರ ಬಗ್ಗೆ ಮಾತನಾಡಿದ್ದನ್ನು ನೀವು ಕೇಳಿದ್ದೀರಾ?

ಯಾಕೆ ಗೊತ್ತಾ? ಇಲ್ಲಿದೆ ನೋಡಿ ಕಾರಣಗಳು:

**ಬಹಿರಂಗವಾಗದ ಸತ್ಯವೇನೆಂದರೆ ಅಗ್ಗದ ದುಡಿತವೇ ಮೋದಿ ಮಾದರಿಯ ಆಧಾರ**. ನಗರವೇ ಇರಲಿ ಹಾಗೂ ಹಳ್ಳಿಯೇ ಇರಲಿ ಅತ್ಯಂತ ಕಡಿಮೆ ಕೂಲಿ, ತೀರ ಕಡಿಮೆ ಮಾಸಿಕ ಗ್ರಾಹಕ ವೆಚ್ಚವೇ ಮೋದಿ ಮಾದರಿಯ ಮೂಲ. ದುಡಿಯುವ ಜನರ ಬೆವರು ರಕ್ತದ ಮೇಲೆ ಕಟ್ಟಿದ ಅತ್ಯಂತ ಕ್ರೂರ ಮಾದರಿ ಅದು. ಕೈಗಾರಿಕಾ ಹಾಗೂ ಕೃಷಿ ಅಭಿವೃದ್ಧಿಯ ಬಗ್ಗೆ ಗುಜರಾತ್ ಬಡಾಯಿ ಕೊಚ್ಚಿಕೊಳ್ಳುತ್ತಿರುವಾಗಲೇ ಆ ಅಭಿವೃದ್ಧಿಯ ಫಲ ಕಾರ್ಮಿಕರ ಆದಾಯದಲ್ಲಿ ಮಾತ್ರ ಎಂದೂ ಕಾಣಲೇ ಇಲ್ಲ.

ವಿಶೇಷವಾಗಿ, ಗುಜರಾತಿನ ದುಡಿಯುವ ಮಹಿಳೆಯರು ಹೆಚ್ಚು ನಷ್ಟ ಅನುಭವಿಸುತ್ತಿದ್ದಾರೆ.

ಮೋದಿ ಮಾದರಿಯ ಮತ್ತೊಂದು ಹೆಗ್ಗಳಿಕೆ ಯಾವುದೆಂದರೆ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರ ಅತಿ ಕಡಿಮೆ ವಚ್ಚ ಮಾಡುತ್ತಿದೆ. ಮಾನವಾಭಿವೃದ್ಧಿ ಸೂಚ್ಯಾಂಕ ತೀರ ಕಳಪೆಯಾಗಿದೆ. ಗುಜರಾತಿನಲ್ಲಿ ಭಾರಿ ಹೆಚ್ಚುವರಿ ಹಣ ಇದೆ, ಆದರೆ ಅಪೌಷ್ಟಿಕತೆ, ರೋಗ ರುಜಿನ ಅಥವಾ ಅನಕ್ಷರತೆ ಹೋಗಲಾಡಿಸಲು ಅದರ ಬಳಕೆಯಾಗುತ್ತಿಲ್ಲ; ಗುಜರಾತಿನ ಸಾಮಾಜಿಕ ಅಭಿವೃದ್ಧಿಯ ಸೂಚಕ ಸಹ ದಯನೀಯವಾಗಿದೆ. ಸಾಮರ್ಥ್ಯ ಬೆಳೆಸುವ ಬಗ್ಗೆ ಮೋದಿ ಮಾತನಾಡುತ್ತಾರೆ, ಆದರೆ ಅವರ ರಾಜ್ಯದಲ್ಲೇ ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಅತಿ ಹೆಚ್ಚಾಗಿದ್ದು ಅನಕ್ಷರತೆಯ ದರ ಬೇರೆಲ್ಲಾ ರಾಜ್ಯಕ್ಕಿಂತ ಕಳಪೆಯಾಗಿದೆ.

ಬಡಬಗ್ಗರನ್ನು ಸುಲಿಗೆ ಮಾಡಿ ಉದ್ಯಮಿಗಳ ಹೊಟ್ಟೆ ಬೆಳೆಸುವುದೇ ಮೋದಿ ಮಾದರಿಯ ದೊಡ್ಡ ಸಾಧನೆ! ದುಡಿಯುವವರನ್ನು ಲೂಟಿ ಮಾಡಿ ಕೈಗಾರಿಕೋದ್ಯಮಿಗಳ ಲಾಭ ಹೆಚ್ಚಿಸಲಾಗುತ್ತಿದೆ. ತೆರಿಗೆಗಳಿಂದ ರಾಜ್ಯದ ಬೊಕ್ಕಸಕ್ಕೆ ಬರುವ ಹೆಚ್ಚುವರಿ ಮೊತ್ತವನ್ನು ಕಾರ್ಮಿಕರ ಕಲ್ಯಾಣಕ್ಕೆ ಬಳಸದೆ ಖಾಸಗಿ ಉದ್ದಿಮೆದಾರರ ಸಬ್ಸಿಡಿಗೆ ವ್ಯಯಮಾಡಲಾಗುತ್ತಿದೆ.

ಅಂಕಿ ಅಂಶಗಳೇ ಹೇಳುತ್ತವೆ ಸತ್ಯ ಏನೆಂದು:

**ಅಖಿಲ ಭಾರತ ಸರಾಸರಿ ಆದಾಯಕ್ಕಿಂತ ಗುಜರಾತಿನ ಆದಾಯ ಗಳಿಕೆ ಕಡಿಮೆ ಮತ್ತು ಇನ್ನೂ ಕುಸಿಯುತ್ತಿದೆ**

ಹೆಚ್ಚಿನ ಅಭಿವೃಧ್ಧಿ ಮತ್ತು ಕೈಗಾರಿಕೀಕರಣ ಹಾಗೂ ನಗರೀಕರಣದ ಇತಿಹಾಸವೇ ಗುಜರಾತಿನಲ್ಲಿದೆ, ಆದಾಗ್ಯೂ, ಮೋದಿಯ ರಾಜ್ಯಭಾರದಲ್ಲಿ ಆದಾಯ ಮತ್ತು ಗಳಿಕೆ ಇಳಿಯುತ್ತಲೇ ಇದೆ. ಜನಸಮುದಾಯದ ಮಾಸಿಕ ಖರ್ಚು ವೆಚ್ಚದ ಅಂಕಿ ಅಂಶಗಳಲ್ಲಿ ಅದು ಎದ್ದುಕಾಣುತ್ತದೆ. ಕಡಿಮೆ ಸಂಬಳ/ಕೂಲಿ ಅಂದರೆ ಕಡಿಮೆ ಖರ್ಚು ವೆಚ್ಚ.

- ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ 40ರಷ್ಟು ಜನ ದಿನಕ್ಕೆ ರೂ.40 ಕ್ಕಿಂತಲೂ ಕಡಿಮೆ ಖರ್ಚು ಮಾಡಿದರೆ, ಶೇಕಡಾ 90ರಷ್ಟು ಜನ ದಿನಕ್ಕೆ ರೂ.75 ಕಿಂತಲೂ ಕಡಿಮೆ ಖರ್ಚು ಮಾಡುತ್ತಿದ್ದಾರೆ.
- ಪಟ್ಟಣ ಪ್ರದೇಶಗಳಲ್ಲಿ ಶೇಕಡಾ 30ರಷ್ಟು ಜನ ದಿನಕ್ಕೆ ರೂ.55 ಕ್ಕಿಂತಲೂ ಕಡಿಮೆ ಖರ್ಚು ಮಾಡಿದರೆ, ಶೇಕಡಾ 60ರಷ್ಟು ಜನ ದಿನಕ್ಕೆ ರೂ.80ಕ್ಕಿಂತಲೂ ಕಡಿಮೆ ಖರ್ಚು ಮಾಡುತ್ತಿದ್ದಾರೆ. ಗುಜರಾತಿನ ಪಟ್ಟಣಗಳಲ್ಲಿ ತಲಾ ಆದಾಯ ರೂ.2472 ಇದ್ದು ಅದು ದೇಶದ ಸರಾಸರಿ ಆದಾಯವಾದ ರೂ.2477ಕ್ಕಿಂತ ಸ್ವಲ್ಪ ಕಡಿಮೆ ಇದೆ.
- ಆದಾಯದ ಶ್ರೇಣಿಯ 17 ಪ್ರಮುಖ ರಾಜ್ಯಗಳಲ್ಲಿ 2000ನೇ ಇಸವಿಯಲ್ಲಿ (ಗ್ರಾಮೀಣ ಪ್ರದೇಶದಲ್ಲಿ) 4ನೇ ಸ್ಥಾನದಲ್ಲಿದ್ದ ಗುಜರಾತ್ 2012ರಲ್ಲಿ 8ನೇ ಸ್ಥಾನಕ್ಕೆ ಕುಸಿದಿದ್ದರೆ (ಪಟ್ಟಣ ಪ್ರದೇಶದಲ್ಲಿ) 7ನೇ ಸ್ಥಾನದಿಂದ 9ನೇ ಸ್ಥಾನಕ್ಕೆ ಕುಸಿದಿದೆ.

(ಮೂಲ: ಎನ್‌ಎಸ್‌ಎಸ್‌ಒ ಎನ್‌ಎಸ್‌ಎಸ್ ಕೆಐ{68/1.0} ಮತ್ತು 458)

## ಕಾರ್ಖಾನೆ ಕಾರ್ಮಿಕರು

ಕೈಗಾರಿಕಾ ಅಭಿವೃದ್ದಿ ಹೊಂದಿದ ರಾಜ್ಯಗಳಲ್ಲಿ ಒಂದಾಗಿದ್ದರೂ, ಗುಜರಾತಿನ ಕೈಗಾರಿಕಾ ಕಾರ್ಮಿಕರು ಜಾರ್ಖಂಡ್ ಮತ್ತು ಮಹಾರಾಷ್ಟ್ರ ರಾಜ್ಯಗಳ ಕಾರ್ಮಿಕರಿಗಿಂತ ಶೇಕಡಾ 30–40 ರಷ್ಟು ಕಡಿಮೆ ಸಂಬಳ ಪಡೆಯುತ್ತಿದ್ದಾರೆ.

ಜಮೀನು, ವಿದ್ಯುತ್, ತೆರಿಗೆ ಕಡಿತ, ಸುಲಭ ಬ್ಯಾಂಕ್ ಸಾಲ ಮುಂತಾದ ಎಲ್ಲಾ ರೀತಿಯ ಭಾರಿ ರಿಯಾಯತಿಗಳನ್ನು ಕೈಗಾರಿಕೋದ್ಯಮಿಗಳಿಗೆ ನೀಡುತ್ತಿದ್ದಾಗ್ಯೂ ಅದು ಕಾರ್ಮಿಕರ ಸಂಬಳ ಏರಿಕೆಯಲ್ಲಿ ಪ್ರತಿಬಿಂಬಿತವಾಗಿಲ್ಲ.

- 2005–06 ಅವಧಿಯಲ್ಲಿ ಕಾರ್ಮಿಕರ ಸಂಬಳ ವಾರ್ಷಿಕ ಶೇಕಡಾ 9ರಷ್ಟು ಹೆಚ್ಚಾಗಿದೆ. ಅದು ಅಖಿಲ ಭಾರತ ಮಟ್ಟಕ್ಕೆ ಸರಿ ಸಮನಾಗಿದೆ. ಆದರೆ ಅದು ಅಸ್ಸಾಮ್(13%), ಕರ್ನಾಟಕ(12%), ಆಂಧ್ರಪ್ರದೇಶ(11%) ಮುಂತಾದ ರಾಜ್ಯಗಳಿಗಿಂತ ಬಹಳ ಕಡಿಮೆ ಇದೆ. ಅಖಿಲ ಭಾರತ ಸರಾಸರಿ ಮಟ್ಟಕ್ಕಿಂತ ಗುಜರಾತಿನ ಕೈಗಾರಿಕಾ ಕಾರ್ಮಿಕ ಕೇವಲ ರೂ.23 ಹೆಚ್ಚು ಪಡೆಯುತ್ತಿದ್ದಾನಷ್ಟೆ.

**ಗುಜರಾತಿನಲ್ಲಿ ದೇಶದಲ್ಲೇ ಅತ್ಯಂತ ಕಡಿಮೆ ಕೂಲಿ. ಅದು ಶಾಶ್ವತ ನೌಕರಿ ಇರಬಹುದು ಅಥವಾ ತಾತ್ಕಾಲಿಕ ನೌಕರಿ ಇರಬಹುದು, ಪಟ್ಟಣ ಅಥವಾ ಹಳ್ಳಿ, ಮಹಿಳೆ ಅಥವಾ ಪುರುಷರಿಗೆ ಕೂಲಿ ಅತ್ಯಂತ ಕಡಿಮೆ ಇದೆ.**

(ಮೂಲ: ಕೈಗಾರಿಕೆಗಳ ವಾರ್ಷಿಕ ಸಮೀಕ್ಷೆ, 2010–2011)

## ಶಾಶ್ವತ ನೌಕರರು

- ಗ್ರಾಮೀಣ ಪ್ರದೇಶಗಳಲ್ಲಿ ಅಖಿಲ ಭಾರತ ಸರಾಸರಿ ಪುರುಷರ ಕೂಲಿ ರೂ.322.28 ಗುಜರಾತಿನಲ್ಲಿ ಅದು ಕೇವಲ ರೂ.286.69 ಇದೆ.
- ಮಹಿಳೆಯರಿಗೆ ಅಖಿಲ ಭಾರತ ಸರಾಸರಿ ರೂ.201.5 ಇದ್ದರೆ ಗುಜರಾತಿನಲ್ಲಿ ರೂ.173.13 ಮಾತ್ರ.
- ಪಟ್ಟಣ ಪ್ರದೇಶಗಳಲ್ಲಿ ಅಖಿಲ ಭಾರತ ಸರಾಸರಿ ಪುರುಷರಿಗೆ ರೂ.469.87 ಆಗಿದ್ದರೆ ಗುಜರಾತಿನಲ್ಲಿ ಅದು ಕೇವಲ ರೂ. 326.34 ಅಂದರೆ ರೂ. 123 ಕಡಿಮೆ ಕೂಲಿ!
- ಅದು ಮಹಿಳೆಯರಿಗೆ ರೂ.366.15 ಇರುವಾಗ ಗುಜರಾತಿನಲ್ಲಿ ಕೇವಲ ರೂ.271.86.

## ತಾತ್ಕಾಲಿಕ ನೌಕರರು

- **ಗ್ರಾಮೀಣ:** ಪುರುಷರು–ಗುಜರಾತ್(115.77) ಅಖಿಲ ಭಾರತ(149.32) ಮತ್ತು

- ಮಹಿಳೆಯರಿಗೆ–ಗುಜರಾತ್(104.96) ಅಖಿಲ ಭಾರತ(103.28)
- **ಪಟ್ಟಣ:** ಪುರುಷರು–ಗುಜರಾತ್ (160.64) ಅಖಿಲ ಭಾರತ(182.04) ಮತ್ತು
- ಮಹಿಳೆ–ಗುಜರಾತ್(88.84) ಅಖಿಲಭಾರತ(110.62)

(ಮೂಲ:ಎನ್‌ಎಸ್‌ಎಸ್‌ಒ ವರದಿ 554)

## ಕೃಷಿ ಕೆಲಸ

| | | |
|---|---|---|
| ಉತ್ತುವುದು: | ಗುಜರಾತ್ (166) | ಭಾರತ(230) |
| ಬಿತ್ತನೆ: | ಗುಜರಾತ್(142) | ಭಾರತ (199) |
| ಕಳೆ ಕೀಳುವುದು: | ಗುಜರಾತ್(129) | ಭಾರತ (178) |
| ಸುಗ್ಗಿ: | ಗುಜರಾತ್(136) | ಭಾರತ (199) |
| ನಾಟಿ ನೆಡುವುದು: | ಗುಜರಾತ್(122) | ಭಾರತ (186) |
| ಇತರೆ ಅಕುಶಲ ಕೆಲಸ: | ಗುಜರಾತ್ (129) | ಭಾರತ (192) |

(ಮೂಲ: ಲೇಬರ್ ಬ್ಯೂರೋ, ಅಕ್ಟೋಬರ್ 2013)

*ಯುಪಿಎ ಸರ್ಕಾರದ ನೀತಿಗಳಿಂದ ನರಳುತ್ತಿರುವ ಕಾರ್ಮಿಕರ ಅದರಲ್ಲೂ ಮಹಿಳೆಯರ ಕೂಲಿ ವಿಚಾರದಲ್ಲಿ ಇಷ್ಟು ಕಳಪೆ ದಾಖಲೆ ಹೊಂದಿರುವಾಗ ಯಾವುದೇ ಮೋದಿ ಸಾಮ್ರಾಜ್ಯದಲ್ಲಿ ಅದು ತೀರ ಕೆಳ ಮಟ್ಟದಲ್ಲಿ ಇರುತ್ತದೆ ಎಂಬುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ? ದೇಶಾದ್ಯಂತ ಜಾರಿ ಮಾಡಲು ಹೊರಟಿರುವ ಈ ಮೋದಿ ಮಾದರಿ ಅಭಿವೃದ್ಧಿಯನ್ನು ಭಾರತದ ದುಡಿಯುವ ಜನ ಒಗ್ಗಟ್ಟಿನಿಂದ ಶತಾಯ ಗತಾಯ ಸೋಲಿಸಲೇಬೇಕು.*

## ಉದ್ಯೋಗರಹಿತ ಅಭಿವೃದ್ಧಿ

ಯುವಜನರಿಗಾಗಿಯೇ ತನ್ನಲ್ಲಿ ಒಂದು ಮಂತ್ರದಂಡ ಇದೆ ಎಂದು ಮೋದಿ ಕೊಚ್ಚಿಕೊಳ್ಳುತ್ತಿದ್ದಾರೆ. ಆ ದಂಡವನ್ನು ಗುಜರಾತಿನಲ್ಲಿ ಉದ್ಯೋಗ ಒದಗಿಸಲು ಏಕೆ ಬಳಸುತ್ತಿಲ್ಲ?

ವಾಸ್ತವವಾಗಿ ಗುಜರಾತಿನಲ್ಲಿ ಉದ್ಯೋಗದ ಬೆಳವಣಿಗೆಯ ದರ ದೇಶದ ಉಳಿದೆಡೆಗಿಂತ ನಿಧಾನಗತಿಯಲ್ಲಿದೆ ಮತ್ತು ಮಹಿಳೆಯರ ವಿಚಾರದಲ್ಲಿ ಉದ್ಯೋಗಾವಕಾಶ ಕುಸಿಯುತ್ತಿದೆ–ಇದೇ ಮೋದಿ ಮಾದರಿಯ ಉದ್ಯೋಗರಹಿತ ಅಭಿವೃದ್ಧಿ.

- 2001–2011ರ ಅವಧಿಯಲ್ಲಿ ಅಖಿಲ ಭಾರತ ಬೆಳವಣಿಗೆ 1.2% ಆಗಿದ್ದರೆ, ಗುಜರಾತಿನಲ್ಲಿ ಕಾರ್ಮಿಕರ ಒಟ್ಟು ಸಂಖ್ಯೆಯಲ್ಲಿ ತೀರ ಕೆಳಮಟ್ಟದ 0.4% ಬೆಳವಣಿಗೆಯಷ್ಟೆ ಆಗಿದೆ. ಮಹಿಳಾ ಕಾರ್ಮಿಕರ ಬೆಳವಣಿಗೆ ಅಖಿಲ ಭಾರತ ಮಟ್ಟದಲ್ಲಿ 1% ಹೆಚ್ಚಾಗಿದ್ದರೆ, ಗುಜರಾತಿನಲ್ಲಿ ಅದು 1% ಕುಸಿದಿದೆ.
- ಜನಸಂಖ್ಯೆಯ ಬೆಳವಣಿಗೆಗೆ ಹೊಂದಿಸಿದಾಗ, 2001–2011ರ ಅವಧಿಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 2.1% ಹೆಚ್ಚಾಗಿರುವಾಗ, ಗುಜರಾತಿನಲ್ಲಿ ಕಾರ್ಮಿಕರ/ಉದ್ಯೋಗಾವಕಾಶ 2.8% ಕುಸಿದಿದೆ.

ಹತಾಶೆಯಿಂದ ಉದ್ಯೋಗ ಅರಸುತ್ತಿರುವ ದುಡಿಯುವ ವರ್ಗದ ಯುವಜನರು ಅರಿಯಬೇಕಾದ್ದೇನೆಂದರೆ ಮೋದಿಯ ಮೋಡಿ ಗುಜರಾತಿನಲ್ಲೇ ನಡೆಯದಿದ್ದಾಗ ಅಖಿಲ ಭಾರತ ಮಟ್ಟದಲ್ಲಿ ಅದು ಯುಪಿಎ ಸರ್ಕಾರಕ್ಕಿಂತ ಭಿನ್ನವಾಗೇನೂ ಇರಲು ಸಾಧ್ಯವಿಲ್ಲ ಎಂದು. (ಮೂಲ: 2001 ಮತ್ತು 2011 ಜನಗಣತಿ)

## ರಾಜ್ಯದ ನಿಧಿ ಹೋಗುತ್ತಿರುವುದಾದರೂ ಎಲ್ಲಿಗೆ?

ಅಪಾರ ಪ್ರಮಾಣದ ರಿಯಾಯಿತಿಯನ್ನು ಖಾಸಗಿ ಕಾರ್ಪೊರೇಟ್ ಕಂಪನಿಗಳಿಗೆ ಕೊಡುತ್ತಿರುವ ಗುಜರಾತ್ ಸರ್ಕಾರಕ್ಕೆ, ಪಾಪ, ಸರ್ಕಾರಿ ರಂಗದಲ್ಲಿನ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು ಉತ್ತಮಪಡಿಸಲು ಹಣವೇ ಇಲ್ಲ! ಇಲ್ಲಿ ಮೋದಿ ಮನಮೋಹನ್ ಸಿಂಗ್ ಅವರ ಖಾಸಗೀಕರಣ ಮತ್ತು ಸಾಮಾಜಿಕ ರಂಗದ ಯೋಜನೆಗಳಿಗೆ ಸಾರ್ವಜನಿಕ ಹಣ ವ್ಯಯ ಮಾಡುವುದನ್ನು ಕಡಿತಗೊಳಿಸುವ ಮಾದರಿಯನ್ನು ಅನುಷ್ಠಾನ ಮಾಡುತ್ತಿದ್ದಾರೆ. ಖಾಸಗಿಯವರಿಂದಲೇ ನಡೆಸಲ್ಪಡುವ ದುಬಾರಿ ಶಾಲೆಗಳು, ಕಾಲೇಜುಗಳು

ಮತ್ತು ಆಸ್ಪತ್ರೆಗಳಿಗೆ ಗುಜರಾತ್ ಹೆಸರುವಾಸಿಯಾಗಿದೆ.

**ಶಿಕ್ಷಣಕ್ಕೆ ಇಲ್ಲ**

- ಮೋದಿಯವರ ಹತ್ತು ವರ್ಷದ ಆಡಳಿತದಲ್ಲಿ ಒಟ್ಟು ವೆಚ್ಚದ ಅನುಪಾತಕ್ಕೆ ಹೋಲಿಸಿದರೆ ಶಿಕ್ಷಣಕ್ಕೆ ಸರಾಸರಿ ವ್ಯಯ ಮಾಡಿದ್ದು 13.2%. ಅಖಿಲ ಭಾರತ ಸರಾಸರಿ 14.8%ಗಿಂತ ಕಡಿಮೆ ಇದೆ. (ಮೂಲ: ಆರ್‌ಬಿಐ)
- 1ರಿಂದ10ನೇ ತರಗತಿವರೆಗೆ ಶಾಲೆ ಬಿಟ್ಟುಹೋಗುವವರ ಸಂಖ್ಯೆ 58% ನಷ್ಟು ಹೆಚ್ಚಿದೆ, ಅಖಿಲ ಭಾರತ ಸರಾಸರಿಯಾದ 49%ಗಿಂತ ತೀರ ಕಡಿಮೆ. 17 ಪ್ರಮುಖ ರಾಜ್ಯಗಳಲ್ಲಿ, ಶಿಕ್ಷಣಕ್ಕಾಗಿ ವೆಚ್ಚ ಮಾಡುವಲ್ಲಿ ಗುಜರಾತ್ 14ನೇ ಸ್ಥಾನದಲ್ಲಿದೆ.
- ಜ್ಞಾನ ಮಿತವ್ಯಯ ಮುಂತಾದವುಗಳ ಬಗ್ಗೆ ನಿರರ್ಗಳವಾಗಿ ಉಪನ್ಯಾಸ ಮಾಡುವ ಮೋದಿಯ ರಾಜ್ಯದಲ್ಲೇ ಉನ್ನತ ಶಿಕ್ಷಣಕ್ಕೆ ನೋಂದಾಯಿಸಿಕೊಳ್ಳುವವರ ಅನುಪಾತ ಕೇವಲ 18%, ಅಖಿಲ ಭಾರತ ಸರಾಸರಿ 20% ಗಿಂತ ಕಡಿಮೆ. ಆದಿವಾಸಿಗಳ ವಿಚಾರದಲ್ಲಿ ಅದು ಮತ್ತೂ ಕಳಪೆ. ಅಖಿಲ ಭಾರತ ಸರಾಸರಿ 10.8% ಹೋಲಿಸಿದರೆ ಗುಜರಾತಿನಲ್ಲಿ ಅದು ಕೇವಲ 9.7%.

(ಮೂಲ: ಆಯ್ದ ಶಿಕ್ಷಣ ಅಂಕಿ ಅಂಶಗಳು 2010–2011, ಎಂಎಚ್‌ಆರ್‌ಡಿ)

**ಆರೋಗ್ಯಕ್ಕೆ ಇಲ್ಲ**

- ಆರೋಗ್ಯಕ್ಕೆ ಸಂಬಂಧಪಟ್ಟಂತೆ ಸಾಧನೆ ಅತ್ಯಂತ ಮಂಕಾಗಿದೆ. 17 ಪ್ರಮುಖ ರಾಜ್ಯಗಳಲ್ಲಿ ಗುಜರಾತ್ 16ನೇ ಸ್ಥಾನದಲ್ಲಿದೆ. ಎಲ್ಲಾ ರಾಜ್ಯಗಳಲ್ಲಿ ಆರೋಗ್ಯಕ್ಕೆ ಮಾಡುತ್ತಿರುವ ಸರಾಸರಿ ವೆಚ್ಚ 4% ಇದ್ದರೆ ಗುಜರಾತ್ ಆರೋಗ್ಯಕ್ಕೆ 3.4% ಮಾತ್ರ ವ್ಯಯಿಸುತ್ತಿದೆ.

( ಮೂಲ: ಆರ್‌ಬಿಐ)

ಹೆಚ್ಚಾಗಿರುವ ಶಿಶುಮರಣದ ದರದಲ್ಲಿ, ಮಾತೃಮರಣದ ದರ ಹಾಗೂ ರಾಜ್ಯಾದ್ಯಂತ ವ್ಯಾಪಕವಾಗಿ ಹರಡಿರುವ ಅತ್ಯಂತ ಹೆಚ್ಚಿನ ಅಪೌಷ್ಟಿಕತೆಯ ವಿಷಯದಲ್ಲಿ ಅದರ ಪರಿಣಾಮ ಕಾಣಬಹುದು.

## ಭಾರತಕ್ಕೆ ಗುಜರಾತ್ ಮಾದರಿ ಬೇಡವೆ ಬೇಡ

ಗುಜರಾತ್ ಮಾದರಿಯನ್ನು ಭಾರತದ ದುಡಿಯುವ ವರ್ಗ ಎಂದೆಂದೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ.

'ನಿರ್ಣಾಯಕ' ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ 'ಅಭಿವೃದ್ಧಿ'ಯ ಹರಿಕಾರ ಮೋದಿ ಎಂದು ಬಿಂಬಿಸಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಪ್ರಶ್ನೆ– ಈ ಅಭಿವೃದ್ಧಿ ಯಾರಿಗಾಗಿ? ನಿರ್ಣಾಯಕ ತೀರ್ಮಾನ ಯಾರಿಗಾಗಿ?

ಪಟ್ಟಣವಾಸಿಗಳು ಗ್ರಾಮವಾಸಿಗಳು ಮಹಿಳೆಯರು ಪುರುಷರು ಎನ್ನುವ ಯಾವ ಭೇದವೂ ಇಲ್ಲದೆ ಎಲ್ಲಾ ದುಡಿಯುವವರನ್ನು ನಾಚಿಕೆಯಿಲ್ಲದ ಸುಲಿಗೆ ಮಾಡುವ ವ್ಯವಸ್ಥೆಯ ಮೇಲೆ ಗುಜರಾತ್ ಮಾದರಿ ನಿಂತಿದೆ ಎನ್ನುವುದು ಈ ಕಿರುಹೊತ್ತಿಗೆಯಲ್ಲಿ ನಮೂದಿಸಿರುವ ಅಂಕಿ ಅಂಶಗಳು ಗುಜರಾತಿನ ನಿಜವಾದ ಬಣ್ಣವನ್ನು ಬಯಲು ಮಾಡಿದೆ.

**ಕಾರ್ಮಿಕ ವಿರೋಧಿ 'ಗುಜರಾತ್ ಮಾದರಿ'ಯನ್ನು ತಿರಸ್ಕರಿಸಿ ಮತ್ತು ಸೋಲಿಸಿ.**

**ಬಿಜೆಪಿ ಹಾಗೂ ಯುಪಿಎಗೆ ವಿರುದ್ಧ ಜನಪರ ಪರ್ಯಾಯಕ್ಕಾಗಿ**

**ಸಿಪಿಐ(ಎಂ)ಗೆ ಮತ ನೀಡಿ ಎಡಪಕ್ಷಗಳನ್ನು ಬಲಪಡಿಸಿ.**

# ಅನುಬಂಧ

# ಜಮೀನು ವ್ಯವಹಾರಗಳು

**ಮುಂದ್ರ ಬಂದರು ಮತ್ತು ವಿಶೇಷ ಆರ್ಥಿಕ ವಲಯ:**

**ಅಡಾನಿಗೆ ಸಹಾಯ ಮಾಡಲು ಹೋಗಿ ಬೊಕ್ಕಸಕ್ಕೆ ರೂ.10000ಕೋಟಿ ನಷ್ಟ**

2003–04 ರಲ್ಲಿ ಮುಂದ್ರ ಬಂದರು ಮತ್ತು ವಿಶೇಷ ಆರ್ಥಿಕ ವಲಯಕ್ಕಾಗಿ 6700 ಹೆಕ್ಟೇರ್ ಜಮೀನನ್ನು ಪ್ರಭಾವಿ ಅದಾನಿ ಗಂಪಿಗೆ ಮಂಜೂರು ಮಾಡಲಾಯಿತು. ರೈತರಿಂದ ಅಪಾರ ಪ್ರಮಾಣದಲ್ಲಿ ಜಮೀನನ್ನು ಒಂದು ಚದರ ಮೀಟರಿಗೆ ರೂ.1ರಿಂದ ರೂ.32 ರಂತೆ ಬೇಕಾಬಿಟ್ಟಿಯಾಗಿ ತೆಗೆದುಕೊಂಡು, ಅವರಿಗೆ ಕೊಡಲಾಯಿತು. ಆದರೆ ಬಹುಪಾಲು ಜಮೀನನ್ನು ಚ.ಮೀ.ಗೆ ರೂ.10 ರಂತೆ ಮಂಜೂರು ಮಾಡಲಾಯಿತು. ಆದಾಗ್ಯೂ, ಆಡಾನಿ ಗುಂಪಿನವರು ಅಲ್ಲಿ ರಸ್ತೆಗಳನ್ನಷ್ಟೆ ನಿರ್ಮಿಸಿ ನಿವೇಶನಗಳನ್ನು ಕೆಲವು ಸಾರ್ವಜನಿಕ ಸಂಸ್ಥೆಗಳನ್ನೂ ಒಳಗೊಂಡಂತೆ ಇತರ ಸಂಸ್ಥೆಗಳಿಗೆ ಸಾವಿರಾರು ರೂಪಾಯಿಗಳ ದರದಲ್ಲಿ ಮಾರಿದರು. ಈ ಅವ್ಯವಹಾರದಿಂದ ಸರ್ಕಾರದ ಬೊಕ್ಕಸಕ್ಕೆ ಏನಿಲ್ಲೆಂದರೂ ರೂ.10000 ಕೋಟಿ ನಷ್ಟವಾಗಿದೆ.

**ಅಡಾನಿ ಪವರ್ ಲಿ. ಮತ್ತೆ ಅಡಾನಿಗೆ ಬಹುಮಾನ**

ಜನಸಾಮಾನ್ಯರಿಗೆ ತೀರಾ ದುಬಾರಿ ಎನ್ನುವುದನ್ನೂ ಪರಿಗಣಿಸದೆ ಗುಜರಾತಿನ ಬಿಜೆಪಿ ಸರ್ಕಾರವು ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಅಡಾನಿ ಗಂಪಿನಿಂದ ವಿದ್ಯುತ್ ಖರೀದಿ ಮಾಡಿತು. 2006ರಲ್ಲಿ, ಗುಜರಾತಿನಲ್ಲಿ ತೀವ್ರ ವಿದ್ಯುತ್ ಕೊರತೆಯಾಗಿದ್ದಾಗ ಗುಜರಾತ್ ಉರ್ಜ ವಿಕಾಸ್ ನಿಗಮ ನಿ. (ಜಿಯುವಿಎನ್‌ಎಲ್) ವು 3000 ಮಿ.ವ್ಯಾ.ವಿದ್ಯುತ್ ಉತ್ಪಾದಿಸಲು ಖಾಸಗಿ ಕಂಪನಿಗಳಿಗೆ ಕರೆ ಕೊಟ್ಟಿತು. ಅದು ಅಡಾನಿ ಗುಂಪಿನೊಂದಿಗೆ ಎರಡು ವಿದ್ಯುತ್ ಒಪ್ಪಂದ ಮಾಡಿಕೊಂಡು ಪ್ರತಿಯೊಂದೂ 1000 ಮಿ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಬೇಕೆಂದು ತಿಳಿಸಿತು. ಒಂದನ್ನು ಯೂನಿಟ್ಟಿಗೆ ರೂ.2.89ಯಂತೆಯೂ ಮತ್ತೊಂದು ಯೂನಿಟ್ಟಿಗೆ 2.35ಯಂತೆಯೂ

ಒಪ್ಪಂದವಾಯಿತು. ಆದರೆ, ಸ್ವಲ್ಪ ದಿನಗಳ ಮುಂಚೆಯಷ್ಟೆ ಆ ನಿಗಮವು(ಜಿಯುವಿಎನ್‌ಎಲ್) ಕೋಸ್ಟಲ್ ಗುಜರಾತ್ ಪವರ್ ಪ್ರಾಜೆಕ್ಟ್ ನೊಂದಿಗೆ ವಿದ್ಯುತ್ ಖರೀದಿಗೆ ಒಂದು ಯೂನಿಟ್ಟಿಗೆ ರೂ.2.26ಯಂತೆ ಒಪ್ಪಂದ ಮಾಡಿಕೊಂಡಿತ್ತು. ಅಂದರೆ ಒಂದು ಯೂನಿಟ್ಟಿಗೆ 63 ಪೈಸೆಯಷ್ಟು ಕಡಿಮೆ! ಒಂದು ಸರಳ ಲೆಕ್ಕಾಚಾರದ ಪ್ರಕಾರ 2011ರಲ್ಲಿ 7000 ಮಿಲಿಯನ್ ಯೂನಿಟ್ ವಿದ್ಯುತ್ ಪೂರೈಕೆಗೆ ರೂ.441 ಕೋಟಿ ಮತ್ತು 2012ರಲ್ಲಿ 14393 ಯೂನಿಟ್ಟಿಗೆ ರೂ.906ಕೋಟಿ ಅಂದರೆ ಒಟ್ಟು ರೂ.1347 ಕೋಟಿಯಷ್ಟು ಹೆಚ್ಚು ಹಣವನ್ನು ಜಿಯುವಿಎನ್‌ಎಲ್ ನಿಗಮವು ಅಡಾನಿ ಗುಂಪಿಗೆ ಲಾಭ ಮಾಡಿಕೊಟ್ಟಿತು. ಅತ್ತ ಸಾಮಾನ್ಯ ಗ್ರಾಹಕರು, ರೈತರು ಮತ್ತು ಸಾಮಾನ್ಯ ಜನ ಹೆಚ್ಚು ಹಣ ತೆರಬೇಕಾಯಿತು.

**ಕಾರ್ಪೊರೇಟುಗಳ ಆಶ್ರಯಧಾಮದಲ್ಲಿ**
**'ಹಿತಕರ' ವ್ಯವಹಾರಗಳು**

- 2ಜಿ ಹಗರಣದಲ್ಲಿ ಸೇರಿಕೊಂಡಿರುವ ಎಸ್ಸಾರ್ ಗುಂಪಿನ ಕಂಪನಿಗಳು ಟಾಟಾ ಟೆಲಿಕಮ್ಯುನಿಕೇಷನ್ಸ್ ಜತೆಗೂಡಿ ಮೋದಿಯಿಂದ ಅನುಕೂಲಕರ ಒಪ್ಪಂದವನ್ನು ಪಡೆದುಕೊಂಡಿದ್ದಾರೆ. ಅರಣ್ಯ ಪ್ರದೇಶವನ್ನು ಒಳಗೊಂಡಂತೆ ಕರಾವಳಿ ನಿಯಂತ್ರಣ ವಲಯ (ಕೋಸ್ಟಲ್ ರೆಗ್ಯುಲೇಟರಿ ಜೋನ್)ದ ಕೆಲವು ಜಮೀನುಗಳನ್ನು ಸೇರಿಸಿಕೊಂಡು ಸರಿಸುಮಾರು 2,07,60,000 ಚದರ ಮೀಟರ್ ಪ್ರದೇಶವನ್ನು ಅವರಿಗೆ ನೀಡಲಾಗಿದೆ. ಈ ವಲಯದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯವನ್ನು ಸರ್ವೋಚ್ಚ ನ್ಯಾಯಾಲಯ ನಿಷೇಧ ಮಾಡಿದೆ. ಈ ಜಮೀನನ್ನು ಅವರಿಗೆ ಕೊಟ್ಟಾಗ ಅರಣ್ಯ ರಕ್ಷಣಾಧಿಕಾರಿಯು ಒಂದು ದೂರನ್ನು–ಅರಣ್ಯ ಅಪರಾಧ ಸಿಆರ್–ನಂ.2–2006–ದಾಖಲು ಮಾಡಿದ್ದು ಅದರ ಪ್ರಕಾರ ಭಾರತ ಅರಣ್ಯ ಕಾಯಿದೆ, 1927ರ ಅಡಿಯಲ್ಲಿ ಅದು ಶಿಕ್ಷಾರ್ಹ. ಇಂತಹ ನಾಲ್ಕು ವಿವಿಧ ಅಪರಾದಗಳು ದಾಖಲಾಗಿದ್ದಾಗ್ಯೂ ಗುಜರಾತಿನ ಬಿಜೆಪಿ ಸರ್ಕಾರ ಕೇವಲ ರೂ.20ಲಕ್ಷ ದಂಡ ವಸೂಲು ಮಾಡುವ ಮೂಲಕ

ಅವೆಲ್ಲವನ್ನೂ ಇತ್ಯರ್ಥಗೊಳಿಸಿದೆ. ಅರಣ್ಯ ಪ್ರದೇಶದಲ್ಲಿ ನಿರ್ಮಿಸಿದ್ದ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಿ ಅರಣ್ಯ ಇಲಾಖೆಗೆ ಜಮೀನನ್ನು ಹಿಂತಿರುಗಿಸಬೇಕು ಎಂಬ ನಿರ್ದೇಶನವನ್ನು ರಾಜ್ಯ ಸರ್ಕಾರ ಜಾರಿಗೊಳಿಸಿಲ್ಲ. ಎಸ್ಸಾರ್ ಇಂದಿಗೂ ಆ ಜಮೀನನ್ನು ಅನುಭವಿಸುತ್ತಿದೆ. ಆ ಜಮೀನುಗಳ ಮಾರುಕಟ್ಟೆ ಬೆಲೆ ಒಂದು ಚದರ ಮೀಟರಿಗೆ ರೂ.3000 ಇದೆ. ಅಂದರೆ ಆ ಜಮೀನಿನ ಒಟ್ಟು ಬೆಲೆ ರೂ.6228ಕೋಟಿಯಾಗುತ್ತದೆ. ಇದು ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟ. ಪರಿಸರಕ್ಕೆ ಆದ ನಷ್ಟ ಪ್ರತ್ಯೇಕ.

- ಇನ್ನು ಪಶ್ಚಿಮ ಬಂಗಾಳದಿಂದ ಟಾಟಾರವರ ನ್ಯಾನೊ ಕಾರ್ಖಾನೆಯನ್ನು ಗುಜರಾತಿಗೆ ತರಲು ಮೋದಿ 33000 ಕೋಟಿ ರೂಪಾಯಿಗಳ ರಿಯಾಯಿತಿಗಳನ್ನು ನೀಡಿದ್ದಾರೆಂದು ಅಂದಾಜು ಮಾಡಲಾಗಿದೆ. ಅದೂ ಸಾಲದೆಂಬಂತೆ ಅಂತರ್ಜಲ ಸಂಪನ್ಮೂಲವನ್ನು ಬಳಸಿಕೊಳ್ಳಲು ಸಮ್ಮತಿಸುವ ಮೂಲಕ ಅಕ್ಕಪಕ್ಕದ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ವಂಚಿಸಲಾಗಿದೆ.
- ಮತ್ತೊಂದು ಪ್ರಕರಣದಲ್ಲಿ, ಸೂರತ್‌ನ ಪ್ರಮುಖ ಜಾಗದಲ್ಲಿರುವ 108 ವರ್ಷಗಳಷ್ಟು ಹಳೆಯದಾದ ನವಸಾರಿ ಕೃಷಿ ವಿಶ್ವವಿದ್ಯಾನಿಲಯದ ಜಮೀನನ್ನು ಸೆವೆನ್ ಸ್ಟಾರ್ ಹೋಟೆಲ್ ನಿರ್ಮಾಣ ಮಾಡಲು ಛಾತ್ರಾಲ ಇಂಡಿಯಾ ಹೋಟೆಲ್ ಗುಂಪಿಗೆ ನೀಡಲಾಗಿದೆ. ಮಾರ್ಕೆಟ್ ಬೆಲೆ ಒಂದು ಚದರ ಮೀಟರಿಗೆ 1ಲಕ್ಷ ಇರುವಾಗ ಅದನ್ನು ಕೇವಲ ರೂ.15000/ಚ.ಮೀ.ಗೆ ಮಂಜೂರು ಮಾಡಲಾಗಿದೆ. ಈ ವಿಷಯ ಸರ್ವೋಚ್ಚ ನ್ಯಾಯಾಲಯದ ಕಟ್ಟೆ ಹತ್ತಿದ ಮೇಲೆ ಸರ್ಕಾರ ಬೆಲೆಯನ್ನು ಸ್ವಲ್ಪ ಹೆಚ್ಚಿಸಿ ಅದನ್ನು ರೂ.35000/ಚ.ಮೀ.ಗೆ ನಿಗದಿಮಾಡಬೇಕಾಯಿತು. ಬೊಕ್ಕಸಕ್ಕೆ ನೂರಾರು ಕೋಟಿ ರೂಪಾಯಿಗಳ ನಷ್ಟ ಉಂಟಾಯಿತು.
- ಅದೇ ರೀತಿಯಲ್ಲಿ ಕೈಗಾರಿಕಾ ವಲಯದ ಹಜಿರಾ ಸೂರತ್‌ನಲ್ಲಿ ಚ.ಮೀ.ಗೆ ರೂ.3500 ಬೆಲೆ ಇರುವ 8,00,000 ಚ.ಮೀ. ಪ್ರಮುಖ ಜಾಗವನ್ನು ಲ್ಯಾರ್ಸೆನ್ ಅಂಡ್ ಟ್ಯುಬ್ರೋ(ಎಲ್.ಅಂಡ್ ಟಿ)ಗೆ ಯಾವುದೇ ಹರಾಜು

ಇಲ್ಲದೆ ಕೇವಲ ರೂ.1/ಚ.ಮೀ ಗೆ ಮಂಜೂರು ಮಾಡಲಾಗಿದೆ. ಬೊಕ್ಕಸಕ್ಕೆ ಅಪಾರ ನಷ್ಟ ಉಂಟಾಯಿತು.

■ ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ನಡೆದ ತನಿಖೆಯಲ್ಲಿ ರೂ.1700 ಕೋಟಿಯ ಸುಜಲಾಂ ಸುಫಲಾಂ ಯೋಜನೆ ಹಗರಣವೊಂದು 2009ರಲ್ಲಿ ಹೊರಬಿದ್ದಿದೆ. 2003ರಲ್ಲಿ ಉತ್ತರ ಗುಜರಾತಿಗೆ ನೀರಾವರಿ ಮತ್ತು ನೀರು ಪೂರೈಕೆ ಮಾಡಲು ರೂ.6237.33 ಕೋಟಿಯ ಯೋಜನೆಯನ್ನು ಮೋದಿ ಪ್ರಕಟಿಸಿದ್ದರು. ಡಿಸೆಂಬರ್ 2005 ರಲ್ಲಿ ಮುಗಿಸಬೇಕೆಂದು ಆ ಯೋಜನೆಯ ಕೆಲಸವನ್ನು ರೂ.2063 ಕೋಟಿ ಅಂದಾಜಿನ ಮೇಲೆ ಸರ್ಕಾರಿ ಒಡೆತನದ ಗುಜರಾತ್ ವಾಟರ್ ರಿಸೋರ್ಸಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ವಹಿಸಲಾಯಿತು. 2008ರವರೆಗೆ 1127.64 ಕೋಟಿ ರೂಪಾಯಿ ವೆಚ್ಚವಾಗಿತ್ತು. ಸರ್ಕಾರಿ ವೆಚ್ಚದ ಮೇಲೆ ನಿಗಾ ಇಡುವ ಅಲ್ಲಿಯ ರಾಜ್ಯ ವಿಧಾನ ಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ವರದಿಯಲ್ಲಿ ಈ ಮೇಲಿನ ಯೋಜನೆ ಜಾರಿಯಲ್ಲಿ ಹಣಕಾಸಿನ ಅವ್ಯವಹಾರದಿಂದ ರೂ.500 ಕೋಟಿ ನಷ್ಟವಾಗಿದೆ ಎಂದು ಹೇಳಿತು. ತನ್ನ ಭುಜಬಲವನ್ನು ಬಳಸಿದ ಬಿಜೆಪಿ ಸರ್ಕಾರ ಈ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಲು ಬಿಡಲಿಲ್ಲ. ಮಾತೆತ್ತಿದರೆ ರಾಷ್ಟ್ರಮಟ್ಟದಲ್ಲಿ ಸಿಎಜಿ ವರದಿಯ ಬಗ್ಗೆ ಬೊಬ್ಬೆ ಹಾಕುವ ಬಿಜೆಪಿ ಈ ವರದಿಯನ್ನು ಮುಚ್ಚಿ ಹಾಕಿ ಹೊರಲೋಕಕ್ಕೆ ಗೊತ್ತಾಗದಂತೆ ಕಾಪಾಡಿಕೊಂಡು ಬಂದಿದೆ. ಪ್ರಾಯಶಃ ಅದಕ್ಕೇ ಇರಬೇಕು ಗುಜರಾತಿನಲ್ಲಿ ಮೊನ್ನೆ ಮೊನ್ನೆಯವರೆಗೂ ಲೋಕಾಯುಕ್ತ ಸಂಸ್ಥೆಯನ್ನು ಹುಟ್ಟುಹಾಕಲು ಮೋದಿ ಭಯಪಡುತ್ತಿದ್ದರು!

– ಅನುವಾದ: **ಟಿ.ಸುರೇಂದ್ರ ರಾವ್**

# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

# ಒಂದು ಜಾತ್ಯಾತೀತ ಮತ್ತು
# ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
# ಎಡಪಕ್ಷಗಳನ್ನು ಬಲಪಡಿಸಿ

ಬೆಲೆ : ರೂ. 5.00

ಮೂಲ:
ಸಿಪಿಐ(ಎಂ) ಕೇಂದ್ರ ಸಮಿತಿ, ನವದೆಹಲಿ

ಪ್ರಕಟಣೆ:
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ
ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು
ಪ್ರತಿಗಳು: 5,000